ರುಚಿಕರವಾದ ಉಪಹಾರ
ಸಿಹಿ – ಖಾರ ತಿಂಡಿಗಳು
ನ್ಯೂ ಕೋರ್ಟ್ ರೆಸ್ಟೋರೆಂಟ್
ಹೊಸ ಬಸ್‌ಸ್ಟ್ಯಾಂಡ್ ಬಳಿ
ಕುಂದಾಪುರ
ಫೋ : 232878

www.kundaprabha.com e-mail : kundaprabha@gmail.com

# ಕುಂದಪ್ರಭ
ವಾರಪತ್ರಿಕೆ

ಸ್ಥಾಪನೆ : 1948
6 ದಶಕಗಳ ವಿಶ್ವಾಸನೀಯ ಸೇವೆಯಲ್ಲಿ
ಶೇಟ್ ಜ್ಯುವೆಲ್ಲರ್ಸ್
ಶಂಕರ್ ಶೇಟ್ ಬಿಲ್ಡಿಂಗ್
ಮುಖ್ಯರಸ್ತೆ, ಕುಂದಾಪುರ
ಫೋನ್ : 230242

॥ ಸಂಪುಟ : 28 ॥ ಸಂಚಿಕೆ : 21॥ UDP/1263/2018-20 || R.NO.50495/91 ॥ ತಾರೀಕು : 03–07–2018 ॥ ರೂ 5/– ॥ ವಾರ್ಷಿಕ ಚಂದಾ : 300/– ಅಂಚೆಯಲ್ಲಿ : 400/

# ರೋಟರಿ ಜಿಲ್ಲೆ ಗವರ್ನರ್ ಅಭಿನಂದನ್ ಶೆಟ್ಟಿ ಅಧಿಕಾರ ಸ್ವೀಕಾರ

## ಸಚ್ಚಾರಿತ್ರ್ಯ ಅಭಿವೃದ್ಧಿ ಇಂದಿನ ಅಗತ್ಯತೆ

ಮೋಹನ್ ಹೀರಾಚಂದ್ ಪಾಲೇಶಾ



ಮೋಹನ್ ಹೀರಾಚಂದ್ ಪಾಲೇಶಾ





ಅಭಿನಂದನ್ ಶೆಟ್ಟಿ

"ಜೀವನಮೌಲ್ಯ, ಸಚ್ಚಾರಿತ್ರ್ಯದ ಕುರಿತು ಯಾವುದೇ ಶಿಕ್ಷಣ ಸಂಸ್ಥೆಗಳಲ್ಲಿ ಇಂದು ಮಾಹಿತಿ ನೀಡುವ ವ್ಯವಸ್ಥೆ ಇಲ್ಲ. ಇಂದು ಇದು ಬಹಳ ಅಗತ್ಯದ ವಿಚಾರವಾಗಿದೆ. ಈ ಕೊರತೆಯಿಂದಲೇ ಬಹಳಷ್ಟು ಅಸಮಾಧಾನಕರ ಬೆಳವಣಿಗೆಗಳು ನಡೆಯುತ್ತವೆ. ನಾವು ಸ್ವತಃ ವೃತ್ತಿ, ಪ್ರವೃತ್ತಿಗಳಲ್ಲಿ ಸ್ಫೂರ್ತಿ ಪಡೆದು ಇನ್ನೊಬ್ಬರಿಗೆ ಸ್ಫೂರ್ತಿ ನೀಡುವ ಕೆಲಸ ಮಾಡಬೇಕು. ಅಗತ್ಯವುಳ್ಳವರಿಗೆ ಸಹಾಯ ಮಾಡಿದರೆ ಜೀವನದಲ್ಲಿ ಸಾರ್ಥಕತೆ ದೊರೆಯುತ್ತದೆ. ರೋಟರಿ, ಜಗತ್ತಿನಲ್ಲಿ ಜನ ಸೇವೆಗಾಗಿ ಬಹಳ ಉನ್ನತ ಕಾರ್ಯ ಮಾಡುತ್ತಿದ್ದು ರೋಟರಿ ಸದಸ್ಯರೂ ಸಹ ಉತ್ತಮ ಜೀವನ ಮೌಲ್ಯಗಳನ್ನು ಬೆಳೆಸಿಕೊಂಡು ಸಮಾಜದಲ್ಲಿ ಸಮಸ್ಯೆಗೊಳಗಾದವರು ನೆಮ್ಮದಿಯಿಂದ ಬದುಕುವಂತೆ ಮಾಡಬೇಕು" ಎಂದು ಪೂಣೆಯ ಆರ್ಥಿಕ ವ್ಯವಹಾರ ತಜ್ಞ ಪಿಡಿಜಿ ಮೋಹನ್ ಹೀರಾಚಂದ್ ಪಾಲೇಶಾ ಹೇಳಿದರು.

ರೋಟರಿ ಜಿಲ್ಲೆ 3182 ರ ನೂತನ ಗವರ್ನರ್ ಆಗಿ ಕುಂದಾಪುರದ ಅಭಿನಂದನ ಶೆಟ್ಟಿಯವರು ಅಧಿಕಾರ ಸ್ವೀಕರಿಸುವ ಸಮಾರಂಭದ ಮುಖ್ಯ ಅತಿಥಿಗಳಾಗಿ ಮಾತನಾಡುತ್ತಾ ಅವರು ಹೇಳಿದರು.

"ಇಂದು ಸಂಬಂಧಗಳು ದೂರವಾಗುತ್ತಿವೆ. ಭಾವನೆಗಳು ಮರೆಯಾಗುತ್ತಿವೆ. ನಗುವನ್ನೇ ಕಾಣದೆ ಸಂಜೆಯಾಗುತ್ತಿದೆ. ನಮ್ಮ ಬದುಕಿನ ಅರ್ಥವನ್ನೇ ನಾವು ಕಳೆದುಕೊಳ್ಳುತ್ತಿದ್ದೇವೆ. ನಾವು ಮಾನವರಾಗಿ ಹುಟ್ಟಿದ್ದೇ ದೊಡ್ಡ ಪುಣ್ಯ ಎಂದು ತಿಳಿದುಕೊಂಡು ಮಾನವೀಯತೆಯ ಬಾಳನ್ನು ಬಾಳಬೇಕಾದವರು ನಾವು. ಇನ್ನೊಬ್ಬರಿಗೆ ಸಹಾಯ ಮಾಡುವ, ಉತ್ತಮ ಕಾರ್ಯಗಳಿಗೆ ನೆರವು ನೀಡುವ ಮನೋಭಾವ ಬೆಳೆಸಿಕೊಳ್ಳಬೇಕು. ನಾಳೆ ಎನ್ನುವುದು ಅನಿಶ್ಚಿತ. ನಿರ್ಧಾರವನ್ನು ಇಂದೇ ತೆಗೆದುಕೊಂಡು ಕಾರ್ಯಪ್ರವೃತ್ತರಾಗಬೇಕು" ಎಂದರು.

ರೋಟರಿ ಜಿಲ್ಲಾ ಗವರ್ನರ್ ಆಗಿ ಅಧಿಕಾರ ಸ್ವೀಕರಿಸಿದ ಅಭಿನಂದನ ಶೆಟ್ಟಿಯವರನ್ನು ಅಭಿನಂದಿಸಿ ಶುಭ ಹಾರೈಸಿದ ಅವರು ಅವರ ಸಾಧನೆ ಇತರರಿಗೆ

(5ನೇ ಪುಟಕ್ಕೆ)

# ಪರಿಷತ್ ವಿಪಕ್ಷ ನಾಯಕ ಕೋಟ ಶ್ರೀನಿವಾಸ ಪೂಜಾರಿ



ಕರ್ನಾಟಕ ರಾಜ್ಯ ವಿಧಾನ ಪರಿಷತ್ ವಿಪಕ್ಷ ನಾಯಕರಾಗಿ ಬಿಜೆಪಿ ಮುಖಂಡ, ಮಾಜಿ ಸಚಿವ ಕೋಟ ಶ್ರೀನಿವಾಸ ಪೂಜಾರಿ ಆಯ್ಕೆಯಾಗುವ ಮೂಲಕ ಉಡುಪಿ ಜಿಲ್ಲೆಗೆ ಮಹತ್ವದ ಸ್ಥಾನ ಲಭಿಸಿದೆ. ಸುಮಾರು 6 ದಶಕದ ಹಿಂದೆ ವಕ್ವಾಡಿ ಶ್ರೀನಿವಾಸ ಶೆಟ್ಟಿಯವರು ವಿರೋಧ, ಪಕ್ಷದ ನಾಯಕರಾಗಿ ವಿಧಾನ ಪರಿಷತ್‌ನಲ್ಲಿ ಸೇವೆಸಲ್ಲಿಸಿದ ನಂತರ ಅಂತಹ ಪ್ರಮುಖ ಜವಾಬ್ದಾರಿಯನ್ನು ಈ ಭಾಗದಲ್ಲಿ ಯಾರೂ ಪಡೆದಿರಲಿಲ್ಲ.

ಕೋಟ ಶ್ರೀನಿವಾಸ ಪೂಜಾರಿ ವಿರೋಧ ಪಕ್ಷದ ನಾಯಕನಾಗುವ ಮೂಲಕ ಮತ್ತೆ ಸಚಿವ ಮಟ್ಟದ ಸ್ಥಾನಮಾನ ಪಡೆದಿದ್ದು ರಾಜ್ಯಾದ್ಯಂತ ಪ್ರವಾಸ ಮಾಡುವ ಅವಕಾಶ ಲಭ್ಯವಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ಎಸ್.ಯಡಿಯೂರಪ್ಪ ನೇತ್ರತ್ವದ ಕೋರ್‌ಕಮಿಟಿ, ಕೋಟ ಶ್ರೀನಿವಾಸ ಪೂಜಾರಿಯವರನ್ನು ಆಯ್ಕೆ ಮಾಡಿದ ನಂತರ ಸರಕಾರ ಈ ಪ್ರಸ್ತಾಪ ಅಂಗೀಕರಿಸಿ ವಿಪಕ್ಷ ನಾಯಕನಿಗೆ ವಾಹನ ಸೌಲಭ್ಯವನ್ನು ಒದಗಿಸಿದೆ.

ವಿಪಕ್ಷ ನಾಯಕನ ಹುದ್ದೆ ಪಡೆದ ಗೌರವದೊಂದಿಗೆ ಜುಲೈ 7 ರಂದು ಉಡುಪಿ ಜಿಲ್ಲೆಗೆ ಆಗಮಿಸಲಿದ್ದಾರೆ.

ಗ್ರಾಮಪಂಚಾಯತ್, ತಾ.ಪ, ಜಿ.ಪ.ನಲ್ಲಿ ಸೇವೆ ಸಲ್ಲಿಸಿ ವಿಧಾನ ಪರಿಷತ್ ಸದಸ್ಯರಾದ ಕೋಟ ಶ್ರೀನಿವಾಸ ಪೂಜಾರಿ, ಸದನದಲ್ಲೂ , ಸದನದ ಹೊರಗೂ ಪಕ್ಷ ಹಾಗೂ ಜನಸಾಮಾನ್ಯರ ಹಿತಾಸಕ್ತಿಗಾಗಿ ಹೋರಾಟ ನಡೆಸಿ ಜನಪ್ರಿಯರಾಗಿದ್ದಾರೆ. ಪತ್ರಿಕೆಗಳಲ್ಲಿ ಉತ್ತಮ ಲೇಖನಗಳನ್ನು ಬರೆಯುವ ಮೂಲಕ ಗಮನ ಸೆಳೆಯುತ್ತಿದ್ದಾರೆ. ತಾನು ಪ್ರತಿನಿಧಿಸುವ ಸ್ಥಳೀಯ ಸಂಸ್ಥೆಗಳ, ಗ್ರಾಮಪಂಚಾಯತ್‌ಗಳ ಹಿತಾಸಕ್ತಿಗಾಗಿ ಹೋರಾಟ ನಡೆಸುತ್ತಾ ಬಂದಿರುವ ಇವರು ಕೋಟದಲ್ಲಿ ಸರ್ವ ಪಕ್ಷದ ಸ್ಥಳೀಯ ಸಂಸ್ಥೆಗಳ ಸದಸ್ಯರನ್ನು ಒಗ್ಗೂಡಿಸಿ ಬೃಹತ್ ಸಮಾವೇಶ ನಡೆಸುವಲ್ಲಿ ಕೋಟತಟ್ಟು ಗ್ರಾಮಪಂಚಾಯತ್ ಹಾಗೂ ಕಾರಂತ ಪ್ರತಿಷ್ಠಾನ (ರಿ) ದ ಸಂಘಟಕರಿಗೆ ಸ್ಫೂರ್ತಿ, ಪ್ರೇರಣೆ ತುಂಬಿದವರು.

ಧಾರ್ಮಿಕ ದತ್ತಿ ಸಚಿವರಾಗಿಯೂ ಅನುಭವ ಹೊಂದಿರುವುದರಿಂದ ಆಡಳಿತಾನುಭಾವವೂ ಇದೆ.

ಈಶ್ವರಪ್ಪ ವಿರೋಧಪಕ್ಷದ ನಾಯಕರಾಗಿದ್ದಾಗಲೂ, ಪರಿಷತ್‌ನಲ್ಲಿ ಚರ್ಚೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಮೂಲಕ ಸುದ್ದಿಯಲ್ಲಿರುತ್ತಿದ್ದ ಇವರು ವಿರೋಧ ಪಕ್ಷದ ನಾಯಕರಾಗಿ ಹೆಚ್ಚು ಸದ್ದು ಮಾಡುವ ಅವಕಾಶ ಲಭಿಸಿದೆ. ಮಾಜಿ ಶಾಸಕ ಅಪ್ಪಣ್ಣ ಹೆಗ್ಡೆ ಸಹಿತ ಹಲವು ಹಿರಿಯರು ಇವರಿಗೆ ಅಭಿನಂದನೆ ಸಲ್ಲಿಸಿದ್ದಾರೆ.

